# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ದೂರವಾಣಿ ಸಂಖ್ಯೆ : 080-22212343

ಅಂತರ್ಜಾಲ : https://kptcl.karnataka.gov.in
ಇ-ಮೇಲ್ ವಿಳಾಸ : director.ahr.kptcl@gmail.com

**ವಿಷಯ:** ಹಾವೇರಿ ಜಿಲ್ಲೆ, ಹಿರೇಕೆರೂರು ಮತ್ತು ರಟ್ಟೀಹಳ್ಳಿ 110 ಕೆ.ವಿ. ಉಪಕೇಂದ್ರಗಳ ಆವರಣದಲ್ಲಿ ಹೆಸ್ಕಾಂ ನ ನೂತನ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು ಕವಿಪ್ರನಿನಿ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ.

**ಉಲ್ಲೇಖ:**
1. ಕವಿಪ್ರನಿನಿ/ಬಿ9/4948/04-05 ದಿನಾಂಕ 29/04/2005.
2. ಕವಿಪ್ರನಿನಿ/ಬಿ9/4948/04-05 ದಿನಾಂಕ 26/10/2006.
3. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರ ಪತ್ರ ಸಂಖ್ಯೆ: 13029-31 ದಿನಾಂಕ 17/09/2022.
4. ಕವಿಪ್ರನಿನಿ/ಉಪ್ರವ್ಯ(ತಾ)/ಸಿವಿಲ್(ವಿ9)/6/2022/ವ್ಯಸ್ಥಿ(ಇ-26413) ದಿನಾಂಕ 01/10/2022.
5. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರ ಪತ್ರ ಸಂಖ್ಯೆ: 27926-27 ದಿನಾಂಕ 15/03/2023.

**ಪೀಠಿಕೆ:**

1. ಹಾವೇರಿ ಜಿಲ್ಲೆ, ಹಿರೇಕೆರೂರು 110 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಸರ್ವೆ ಸಂಖ್ಯೆ 335/1 ರಲ್ಲಿ 5-00 ಎಕರೆ ಜಮೀನು ಕವಿಪ್ರನಿನಿ ಒಡೆತನದಲ್ಲಿರುತ್ತದೆ. ಸದರಿ ಆವರಣದಲ್ಲಿ 110 ಕೆ.ವಿ. ಉಪಕೇಂದ್ರ, ಹೆಸ್ಕಾಂ ನ ಉಪವಿಭಾಗ ಕಚೇರಿ ಕಟ್ಟಡ, ಉಗ್ರಾಣ, ವಸತಿ ಗೃಹಗಳು ಇತ್ಯಾದಿಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ, ಹೆಸ್ಕಾಂನ ಉಪವಿಭಾಗ ಕಚೇರಿ ಮತ್ತು ಉಗ್ರಾಣಗಳು ನಿಗಮದ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದೆ. ಹಾಲಿ ಇರುವ ಹೆಸ್ಕಾಂನ ಉಪವಿಭಾಗ ಕಚೇರಿ ಕಟ್ಟಡ ಕಚೇರಿ ವಾಸ್ತವ್ಯಕ್ಕೆ ಅನುಕೂಲವಿಲ್ಲದ ಕಾರಣ, ಸದರಿ ಕಟ್ಟಡದ ಪಕ್ಕದಲ್ಲಿ ಖಾಲಿ ಇರುವ ಸುಮಾರು 42 ಮೀ. X 35 ಮೀ. ಅಳತೆಯ ಜಾಗದಲ್ಲಿ ನೂತನ ಉಪವಿಭಾಗ ಕಚೇರಿ ಕಟ್ಟಡ ನಿರ್ಮಿಸಲು ಸದರಿ ಜಾಗವನ್ನು ಲೀಸ್ ಆಧಾರದ ಮೇಲೆ ನೀಡಲು ಹೆಸ್ಕಾಂ ಕೋರಿಕೆ ಸಲ್ಲಿಸಿದೆ. ನೂತನ ಉಪವಿಭಾಗ ಕಚೇರಿ ಕಟ್ಟಡ ನಿರ್ಮಿಸಿದ ನಂತರ ಹಾಲಿ ಇರುವ ಉಪವಿಭಾಗ ಕಚೇರಿ ಕಟ್ಟಡವನ್ನು ಶಾಖಾ ಕಚೇರಿಗಳ ವಾಸ್ತವ್ಯಕ್ಕೆ ಉಪಯೋಗಿಸಲಾಗುವುದೆಂದು ತಿಳಿಸಲಾಗಿದೆ.

2. ಹಾವೇರಿ ಜಿಲ್ಲೆ, ರಟ್ಟೀಹಳ್ಳಿ 110 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಸರ್ವೆ ಸಂಖ್ಯೆ 91/ಬಿ ರಲ್ಲಿ 1 ಎಕರೆ 32 ಗುಂಟೆ ಜಮೀನು ಕವಿಪ್ರನಿನಿ ಒಡೆತನದಲ್ಲಿರುತ್ತದೆ. ಸದರಿ ಆವರಣದಲ್ಲಿ ನಿಗಮದ 110 ಕೆ.ವಿ. ಉಪಕೇಂದ್ರ, ಹೆಸ್ಕಾಂನ ಶಾಖಾ ಕಚೇರಿ ಹಾಗೂ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ, ಹೆಸ್ಕಾಂನ ಶಾಖಾ ಕಚೇರಿ ನಿಗಮದ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದೆ. ರಟ್ಟೀಹಳ್ಳಿಯಲ್ಲಿ ನೂತನ ಉಪವಿಭಾಗ ಕಚೇರಿ ಮಂಜೂರಾಗಿದ್ದು, ಸದರಿ ಕಚೇರಿ ಖಾಸಗಿ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದೆ. ಆದ ಕಾರಣ, ಹಾಲಿ ಇರುವ ಹಳೆಯ ಶಾಖಾ ಕಚೇರಿ ಕಟ್ಟಡವನ್ನು ತೆರವುಗೊಳಿಸಿ, ಸದರಿ ಜಾಗವನ್ನು ಒಳಗೊಂಡಂತೆ 450 ಚದುರ ಮೀಟರ್ ವಿಸ್ತೀರ್ಣದ ಜಾಗವನ್ನು ಹೆಸ್ಕಾಂನ ನೂತನ ಉಪವಿಭಾಗ ಕಚೇರಿ ಕಟ್ಟಡವನ್ನು ನಿರ್ಮಿಸಲು ಲೀಸ್ ಆಧಾರದ ಮೇಲೆ ನೀಡಲು, ಹೆಸ್ಕಾಂ ಕೋರಿಕೆ ಸಲ್ಲಿಸಿದೆ. ಹಾಲಿ ಇರುವ ಶಾಖಾ ಕಚೇರಿ ಕಟ್ಟಡವನ್ನು 1987 ರಲ್ಲಿ ರೂ.1,05,000/- ಮೂಲ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಸದರಿ ಕಟ್ಟಡದ ಸವಕಳಿ ನಂತರದ ಮೂಲ ಬೆಲೆ ಸುಮಾರು ರೂ.10,500/- ಗಳಾಗಿರುತ್ತದೆ

3. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರು ಹಿರೇಕೆರೂರು ಹಾಗೂ ರಟ್ಟೆಹಳ್ಳಿ 110 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಹೆಸ್ಕಾಂನ ನೂತನ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು ಹಿರೇಕೆರೂರು ಉಪಕೇಂದ್ರದ ಆವರಣದಲ್ಲಿ ಸುಮಾರು 42 ಮೀ X 35 ಮೀ ಅಳತೆಯ ಜಾಗವನ್ನು ಹಾಗೂ ರಟ್ಟೆಹಳ್ಳಿ ಉಪಕೇಂದ್ರದ ಆವರಣದ ಒಂದು ಮೂಲೆಯಲ್ಲಿನ ಹಾಲಿ ಇರುವ ಶಾಖಾ ಕಚೇರಿಯನ್ನೊಳಗೊಂಡಂತೆ ತ್ರಿಕೋನಕಾರದ 450 ಚದುರ ಮೀಟರ್ ವಿಸ್ತೀರ್ಣದ ಜಾಗವನ್ನು (ನಕ್ಷೆಗಳಲ್ಲಿ ಗುರುತಿಸಿರುವಂತೆ) 30 ವರ್ಷಗಳ ಲೀಸ್ ಆಧಾರದ ಮೇಲೆ ನೀಡುವಂತೆ ಉಲ್ಲೇಖ (3) ಮತ್ತು (5) ರ ಪತ್ರಗಳಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ) ರವರ ಕಚೇರಿಯ ಟಿಪ್ಪಣಿಯಲ್ಲಿ ಸದರಿ ಜಾಗವನ್ನು ಹೆಸ್ಕಾಂ ಗೆ ನೀಡುವುದರಿಂದ ಹಾಲಿ ಇರುವ ಉಪಕೇಂದ್ರದ ವಿಸ್ತರಣೆಗೆ ಅಡಚಣೆ ಉಂಟಾಗುವುದಿಲ್ಲವೆಂದು ತಿಳಿಸಿರುತ್ತಾರೆ.

4. ಕವಿಪ್ರನಿನಿ ಯ ಒಡೆತನದಲ್ಲಿದ್ದ ಒಟ್ಟಾರೆ ಆಸ್ತಿಯನ್ನು ಪ್ರಸರಣ ಆಸ್ತಿ ಹಾಗೂ ವಿತರಣಾ ಆಸ್ತಿಗಳೆಂದು ವರ್ಗೀಕರಿಸಿದ ನಂತರ, ಎಸ್ಕಾಂ ಗಳಿಗೆ ಅವಶ್ಯವಿರುವ ಕವಿಪ್ರನಿನಿ ಜಾಗವನ್ನು ಹಾಗೂ ಕವಿಪ್ರನಿನಿ ಗೆ ಅವಶ್ಯವಿರುವ ಎಸ್ಕಾಂ ಗಳ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ, ದಿನಾಂಕ 29/04/2005 ರ ಆದೇಶದಲ್ಲಿ Arms-Length Arrangement ನ್ನು ಅನುಮೋದಿಸಲಾಗಿದೆ. ಸದರಿ ಆದೇಶದನ್ವಯ, ಕವಿಪ್ರನಿನಿ ಯಿಂದ ಎಸ್ಕಾಂಗಳಿಗೆ ಲೀಸ್ ಆಧಾರದ ಮೇಲೆ ನೀಡುವ ಜಾಗಗಳ ವಾರ್ಷಿಕ ಲೀಸ್ ಮೊತ್ತವನ್ನು ಸಾಂಕೇತಿಕವಾಗಿ ಪ್ರಚಲಿತ ಮಾರ್ಗಸೂಚಿ ಬೆಲೆಯ 0.1% ರಂತೆ ನಿಗದಿಪಡಿಸಬಹುದಾಗಿದ್ದು, ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ ಅಂದಿನ ಮಾರ್ಗಸೂಚಿ ಬೆಲೆಯನ್ವಯ ಪರಿಷ್ಕರಿಸಬಹುದಾಗಿರುತ್ತದೆ.

5. ಈ ಹಿನ್ನೆಲೆಯಲ್ಲಿ, ಹಾವೇರಿ ಜಿಲ್ಲೆ, ಹಿರೇಕೆರೂರು 110 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಹೆಸ್ಕಾಂ ಕೋರಿಕೆಯಂತೆ 42 ಮೀ X 35 ಮೀ ಅಳತೆಯ ಜಾಗವನ್ನು ಹಾಗೂ ರಟ್ಟೆಹಳ್ಳಿ 110 ಕೆ.ವಿ ಉಪಕೇಂದ್ರದ ಆವರಣದಲ್ಲಿ 450 ಚದುರ ಮೀಟರ್ ವಿಸ್ತೀರ್ಣದ ಜಾಗವನ್ನು (ತೆರವುಗೊಳಿಸಲಾಗುವ ಶಾಖಾ ಕಚೇರಿಯನ್ನೊಳಗೊಂಡಂತೆ) ನೂತನ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಚಾಲ್ತಿಯಲ್ಲಿರುವ Arms-Length Arrangement ರನ್ವಯ, ಹೆಸ್ಕಾಂ ಗೆ 30 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ನೀಡುವ ಹಾಗೂ ರಟ್ಟೆಹಳ್ಳಿ ಉಪಕೇಂದ್ರದ ಆವರಣದಲ್ಲಿ ಹಾಲಿ ಇರುವ ಹಳೆಯ ಶಾಖಾ ಕಚೇರಿ ಕಟ್ಟಡವನ್ನು "as is where is basis" ಆಧಾರದಲ್ಲಿ ಹೆಸ್ಕಾಂ ವತಿಯಿಂದಲೇ ತೆರವುಗೊಳಿಸುವ ಪ್ರಸ್ತಾವನೆಯನ್ನು, ಅನುಮೋದನೆಗಾಗಿ ಮಂಡಳಿಯ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿತ್ತು.

6. ಸದರಿ ಪ್ರಸ್ತಾವನೆಯ ದಿನಾಂಕ 19/07/2023 ರಂದು ನಡೆದ 140 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

*"**RESOLVED THAT** approval be and is hereby accorded to spare the identified land measuring (1) 42 Mtrs X 35 Mtrs of land at 110kV station premises, Hirekeruru (2) 450 Smtr of land (Including section office building proposed for dismantling) at 110kV station, Rattihalli in Haveri District to HESCOM, for a period of 30 years, as per the Arms-length arrangement between KPTCL and ESCOMs, for construction of their subdivision office buildings and to dismantle the old section office building at Rattihalli on "as is where is basis" by HESCOM subject to ascertaining that HESCOM has cleared all the outstanding dues, if any, and lease amount in the concerned zonal jurisdication offices of KPTCL.*

***FURTHER RESOLVED THAT** Director (Admin. & HR), KPTCL be and is hereby authorized to issued necessary orders accordingly"*

ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಪ್ರವ್ಯ(ತಾ)/ಸಿವಿಲ್(ಬಿ9)/6/2023 ವ್ಯಸ್ಥಿ (ಇ-26413) ದಿನಾಂಕ** 07 SEP 2023

ದಿನಾಂಕ 19/07/2023 ರ 140 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯ ನಡವಳಿಯನ್ವಯ ಹೆಸ್ಕಾಂ ಗೆ ಈ ಕೆಳಕಂಡ ಷರತ್ತುಗಳನ್ವಯ ಹಾವೇರಿ ಜಿಲ್ಲೆ, ಹಿರೇಕೆರೂರು ಮತ್ತು ರಟ್ಟೆಹಳ್ಳಿ 110 ಕೆ.ವಿ. ಉಪಕೇಂದ್ರಗಳ ಆವರಣದಲ್ಲಿನ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡಲು ಕೂಡಲೆ ಅಗತ್ಯ ಕ್ರಮಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬಾಗಲಕೋಟೆ ರವರಿಗೆ ನಿರ್ದೇಶನ ನೀಡಲಾಗಿದೆ.

1. ಹಾವೇರಿ ಜಿಲ್ಲೆ, ಹಿರೇಕೆರೂರು 110 ಕೆ.ವಿ. ಉಪಕೇಂದ್ರದ ಆವರಣದಲ್ಲಿ 42 ಮೀ X 35 ಮೀ ಅಳತೆಯ ಜಾಗವನ್ನು ಹಾಗೂ ರಟ್ಟೆಹಳ್ಳಿ 110 ಕೆ.ವಿ ಉಪಕೇಂದ್ರದ ಆವರಣದಲ್ಲಿ 450 ಚದುರ ಮೀಟರ್ ವಿಸ್ತೀರ್ಣದ ಜಾಗವನ್ನು (ತೆರವುಗೊಳಿಸಲಾಗುವ ಶಾಖಾ ಕಚೇರಿಯನ್ನೊಳಗೊಂಡಂತೆ) ನೂತನ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು 30 ವರ್ಷಗಳ ಲೀಸ್ ಆಧಾರದ ಮೇಲೆ ಹೆಸ್ಕಾಂ ಗೆ ಹಂಚಿಕೆ ಮಾಡುವುದು.

2. ರಟ್ಟೆಹಳ್ಳಿ 110 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಹಾಲಿ ಇರುವ ನಿಗಮದ ಶಾಖಾ ಕಚೇರಿ ಕಟ್ಟಡವನ್ನು ಹೆಸ್ಕಾಂ ನ ವತಿಯಿಂದಲೇ 'as is where is basis' ನಂತೆ ತೆರವುಗೊಳಿಸಲು ಹಾಗೂ ಸದರಿ ಕಟ್ಟಡವನ್ನು ತೆರವುಗೊಳಿಸುವ ಟೆಂಡರ್ ಪ್ರಕ್ರಿಯೆಯಲ್ಲಿ ಗುತ್ತಿಗೆದಾರರು ಹೆಸ್ಕಾಂ ಗೆ ಪಾವತಿಸುವಂತಹ ಮೊತ್ತ ಇದ್ದಲ್ಲಿ, ಸದರಿ ಮೊತ್ತವನ್ನು ಕವಿಪ್ರನಿನಿ ಲೆಕ್ಕಕ್ಕೆ ಜಮಾ ಮಾಡುವಂತೆ ಹೆಸ್ಕಾಂ ಗೆ ತಿಳಿಸುವುದು.

3. ಬಾಗಲಕೋಟೆ ಪ್ರಸರಣ ವಲಯದ ವ್ಯಾಪ್ತಿಯಲ್ಲಿ ಹೆಸ್ಕಾಂ ನಿಂದ ಬಾಕಿಯಿರುವ ನಿಗಮದ ಕಟ್ಟಡಗಳ ಬಾಡಿಗೆ, ನೀರು ಸರಬರಾಜು ವೆಚ್ಚ ಹಾಗೂ ನಿಗಮದ ಜಾಗಗಳ ಲೀಸ್ ಮೊತ್ತ ಕಟ್ಟಡಗಳ ನಿರ್ವಹಣೆ ವೆಚ್ಚ ಇತ್ಯಾದಿಗಳನ್ನು ಪಾವತಿಸಿಕೊಂಡು ನಂತರ ಪ್ರಸ್ತಾಪಿಸಿರುವ ಜಾಗಗಳನ್ನು ಹೆಸ್ಕಾಂಗೆ ಹಸ್ತಾಂತರಿಸುವುದು.

4. ಸದರಿ ಜಾಗಗಳನ್ನು ಹೆಸ್ಕಾಂ ಗೆ ನೀಡುವ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿ.ಎಲ್ ಮತ್ತು ಎಸ್.ಎಸ್ ವಿಭಾಗ, ಹಾವೇರಿ ರವರು ಹೆಸ್ಕಾಂನೊಂದಿಗೆ ಲೀಸ್ ಒಪ್ಪಂದ ಮಾಡಿಕೊಳ್ಳುವುದು.

5. ಸದರಿ ಜಾಗಗಳ ಹಾಲಿ ಮಾರ್ಗಸೂಚಿ ಬೆಲೆಯನ್ವಯ ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಹಾಲಿ ಇರುವ Arms-length arrangement ನ ನಿಯಮಗಳಂತೆ, ವಾರ್ಷಿಕ ಲೀಸ್ ಮೊತ್ತವನ್ನು ಲೆಕ್ಕಾಚಾರ ಮಾಡಿ ಪಾವತಿಸುವಂತೆ, ಹೆಸ್ಕಾಂ ಗೆ ಸೂಚಿಸುವುದು.

6. ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ, ಅಂದಿನ ಮಾರ್ಗಸೂಚಿ ಬೆಲೆಯನ್ವಯ ಹಾಗೂ Arms-length arrangement ನ ನಿಯಮಗಳನ್ವಯ, ಪರಿಷ್ಕರಿಸುವುದು. ಹಾಗೂ ವಾರ್ಷಿಕ ಲೀಸ್ ಮೊತ್ತವನ್ನು, ಪ್ರತಿ ವರ್ಷ ಏಪ್ರಿಲ್ ಮಾಹೆಯ ಮೊದಲ ವಾರದಲ್ಲಿ, ಮುಂಗಡವಾಗಿ ಹಾವೇರಿ, ಟಿ.ಎಲ್ ಮತ್ತು ಎಸ್.ಎಸ್ ವಿಭಾಗಕ್ಕೆ ಪಾವತಿಸುವಂತೆ ಹೆಸ್ಕಾಂ ಗೆ ಸೂಚಿಸುವುದು.

7. ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗಗಳನ್ನು, ಉದ್ದೇಶಿತ ಕಟ್ಟಡ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೆ ಉದ್ದೇಶಕ್ಕೆ ಬಳಸಬಾರದೆಂಬ, ಷರತ್ತನ್ನು ವಿಧಿಸುವುದು.

8. ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗಗಳ ಕರಾರು ಒಪ್ಪಂದ ಮಾಡಿಕೊಂಡ ದಿನದಿಂದ, ಒಂದು ವರ್ಷದ ಅವಧಿಯೊಳಗೆ, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಕ್ರಮಕೈಗೊಳ್ಳುವಂತೆ ತಿಳಿಸುವುದು, ಇಲ್ಲವಾದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.

9. ನಿಗಮ ಲೀಸ್ ನೀಡಲು ಅನುಮೋದಿಸಿರುವ ಜಾಗಗಳು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಹೆಸ್ಕಾಂ ಗೆ ಸೂಚಿಸುವುದು.

10. ಲೀಸ್ ಆಧಾರದ ಮೇಲೆ ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ, ಟಿ.ಎಲ್ ಮತ್ತು ಎಸ್.ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

11. ಹೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ ನಿಗಮದ ದಿನಾಂಕ 29/04/2005 ರ ಆದೇಶ ಹಾಗೂ 26/10/2006 ಸುತ್ತೋಲೆಯಲ್ಲಿ ತಿಳಿಸಿರುವ Arms-length arrangement ನ ನಿಯಮಗಳನ್ವಯ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು.

**"ಆದೇಶದ ಮೇರೆಗೆ"**

**ನಿರ್ದೇಶಕರು (ಆ ಮತ್ತು ಮಾ.ಸಂ)**
**ಕವಿಪ್ರನಿನಿ, ಬೆಂಗಳೂರು.**

**ಪ್ರತಿಗಳು:-**

1. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
3. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) / (ಆಂತರಿಕ ಪರಿಶೋಧನೆ), ಕವಿಪ್ರನಿನಿ.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಹುಬ್ಬಳ್ಳಿ.
6. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) - ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.
8. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
9. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿ.ಎಲ್ ಮತ್ತು ಎಸ್.ಎಸ್ ವಿಭಾಗ, ಕವಿಪ್ರನಿನಿ, ಹಾವೇರಿ.
10. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
11. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
12. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ) / ನಿರ್ದೇಶಕರು (ಹಣಕಾಸು) / ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
13. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.